

# ನವಿಲು ಬಂತು ನವಿಲು

## ಮನೆಯಂಗಳದಲ್ಲಿ ‘ಮಯೂರಲಾಸ್ಯ’!

**ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನ ಬಿದ್ರಕಾನ ಎಂಬ ಊರಿನ ಮನೆಯೊಂದರ ಅಂಗಳದಲ್ಲಿ ಪ್ರತಿದಿನ ನವಿಲು ಕಾಣಿಸಿಕೊಳ್ಳುತ್ತದೆ. ಅಲ್ಲಿನ ನೇರ್ಲಮನೆಯ ಯುವತಿಯೊಬ್ಬರು ನವಿಲಿಗೆ ಕೈಯಾರೆ ಆಹಾರ ತಿನ್ನಿಸಿ ಖುಷಿ ಪಡುತ್ತಾರೆ. ಇದೇನು ಸಾಕಿದ ನವಿಲಲ್ಲ, ಕಾಡಿನ ನವಿಲು.**

■ ರಾಮಕೃಷ್ಣ ಸಿದ್ರಪಾಲ

ಮಲೆನಾಡಿನ ಸೊಬಗನ್ನೆಲ್ಲ ತನ್ನೊಡಲೊಳಗೆ ಇಟ್ಟುಕೊಂಡ ಉತ್ತರ ಕನ್ನಡದ ಘಟ್ಟದ ಮೇಲಿನ ಊರುಗಳಲ್ಲಿ ನವಿಲುಗಳ ಓಡಾಟ ತುಸು ಹೆಚ್ಚೇ. ಗರಿಬಿಚ್ಚಿ ಲಾಸ್ಯವಾಡುತ್ತ ಗದ್ದೆ, ತೋಟಗಳಲ್ಲಿ ಓಡಾಡಿಕೊಂಡು, ಹುಳಹುಪ್ಪಟೆ ತಿಂದು ನಲಿದಾಡಿಕೊಂಡಿರುತ್ತವೆ. ಕುರುಚಲು ಕಾಡು, ನೆಲಮಟ್ಟದ ಪೊದೆಗಳಲ್ಲಿ ಗೂಡು ಕಟ್ಟುತ್ತವೆ. ಹಗಲಿಡೀ ಹೆಚ್ಚಾಗಿಯೇ ಕಣ್ಣಿಗೆ ಬೀಳುತ್ತವೆ.

ಇತ್ತೀಚಿನ ವರ್ಷಗಳಲ್ಲಿ ನವಿಲುಗಳನ್ನು ಬೇಟೆಯಾಡದಂತೆ ಕಟ್ಟುನಿಟ್ಟಾಗಿ ಕಾನೂನು ಜಾರಿಗೊಂಡಿರುವುದರಿಂದ, ಮಾಂಸಕ್ಕಾಗಿ ಇಲ್ಲವೇ ಅವುಗಳ ಗರಿಗಳಿಗಾಗಿ ನವಿಲುಗಳ ಬೇಟೆಯಾಡುವುದು ಬಹುತೇಕ ನಿಂತಿದೆ. ಹೀಗಾಗಿ ಅವುಗಳ ಸಂಖ್ಯೆಯೂ ಹೆಚ್ಚಿದೆ. ಬೇಟೆಗಾರರ ಕಾಟ ನಿಂತಿರುವುದರಿಂದಲೇ ಇರಬಹುದು, ತುಸು ಧೈರ್ಯದಿಂದ ನವಿಲುಗಳು ಮನುಷ್ಯರ ಕಣ್ಮುಂದೆ ಗರಿಬಿಚ್ಚುವುದು ನೋಟಕ್ಕೆ ನಿಲುಕುತ್ತಿದೆ.

ಸಾಮಾನ್ಯವಾಗಿ ವರ್ಷವಿಡೀ ಈ ಭಾಗದಲ್ಲಿ ಕಾಣಿಸಿಕೊಳ್ಳುವ ನವಿಲುಗಳು ಮಳೆ, ಬಿಸಿಲು, ಮೋಡಗಟ್ಟಿದಾಗ ಕ್ವಾಂ...ಕ್.... ಕ್ವಾಂ...ಕ್ ಎಂದು ಧ್ವನಿ ಹೊರಡಿಸುತ್ತ ಗುಡ್ಡಬೆಟ್ಟವೇರುತ್ತವೆ. ಸಾಧಾರಣ ಎತ್ತರದ ಮರದ ಕೊಂಬೆಯೇರಿ ಕುಳಿತುಕೊಳ್ಳುತ್ತವೆ. ತೋಟ, ಗದ್ದೆಗಳನ್ನು ಹೊಕ್ಕುವ ನವಿಲುಗಳು ಮನೆಯಂಗಳಕ್ಕೆ ಕಾಲಿಡುವುದು ಅಪರೂಪ. ಮನುಷ್ಯರನ್ನು ಕಂಡ ಕೂಡಲೇ ಕಾಲ್ಕೀಳುತ್ತವೆ.

ನವದೆಹಲಿಯ ಲೋಕಕಲ್ಯಾಣ್ ಮಾರ್ಗದಲ್ಲಿರುವ ತಮ್ಮ ನಿವಾಸದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ನವಿಲುಗಳಿಗೆ ಬೆಳಗಿನ ವಾಯುವಿಹಾರದ ಸಮಯದಲ್ಲಿ ಕಾಳು ತಿನ್ನಿಸುವುದು, ವಾಕಿಂಗ್ ಮಾಡುವಾಗ ಅವು ಗರಿಬಿಚ್ಚಿ ನರ್ತಿಸುವುದು, ಪುಸ್ತಕ ಓದುವಾಗ ಅವರ ಪಕ್ಕದಲ್ಲಿ ನಲಿದಾಡುವ ಮೋಹಕ ದೃಶ್ಯಗಳನ್ನೊಳಗೊಂಡ ವಿಡಿಯೊವನ್ನು ಕೆಲವು ದಿನಗಳ ಹಿಂದೆ ಅವರೇ ತಮ್ಮ ಜಾಲತಾಣದ ಖಾತೆಯಲ್ಲಿ ಹಂಚಿಕೊಂಡಾಗ ಸಾಕಷ್ಟು ಸುದ್ದಿ ಮಾಡಿತ್ತು. 1.47 ನಿಮಿಷದ ಈ ವಿಡಿಯೊದಲ್ಲಿ ಮೋದಿ ನವಿಲುಗಳೊಂದಿಗೆ ಖುಷಿಯಿಂದ ಕಾಲ ಕಳೆಯುತ್ತಿರುವ ದೃಶ್ಯಗಳಿದ್ದವು. ಆ ದೃಶ್ಯಗಳನ್ನು ಕಂಡ ಕೆಲವರಾದರೂ, ನಮ್ಮನೆ ಅಂಗಳದಲ್ಲೂ ನವಿಲುಗಳು ಹೀಗೆ ಓಡಾಡಿಕೊಂಡಿದ್ದರೆ, ನಮ್ಮೆದುರೂ ನವಿಲು ಗರಿಬಿಚ್ಚಿ ನರ್ತಿಸುತ್ತಿದ್ದರೆ ಚೆನ್ನಾಗಿರುತ್ತದೆ ಎಂದು ಕನಸು ಕಂಡಿರಬಹುದು. ಎಷ್ಟು ಜನರಿಗಿದೆ ಆ ಅದೃಷ್ಟ? ಆದರೆ ಅಂತಹ ಅದೃಷ್ಟವಂತರೂ ನಮ್ಮ ನಡುವೆ ಇದ್ದಾರೆ.

ಕಾಡಿನ ನವಿಲೊಂದು ಇಲ್ಲೊಬ್ಬರ ಮನೆಯಂಗಳಕ್ಕೆ ಬಂದು ಗರಿಬಿಚ್ಚಿ ಕುಣಿದು, ಮನೆಯವರ ಕೈತುತ್ತು ತಿಂದುಕೊಂಡು ಹೋಗುತ್ತದೆ.

ಇದೇನು ಸಾಕಿದ ನವಿಲಲ್ಲ. ಕಾಡಿನ ನವಿಲು! ಪ್ರತಿದಿನ ತಪ್ಪದೆ ಮನೆಮುಂದೆ ಹಾಜರಾಗುವ ಈ ನವಿಲು, ಯುವತಿಯಿಂದ ಕೈಯಾರೆ ಆಹಾರ ತಿನ್ನುತ್ತದೆ. ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನ ಬಿದ್ರಕಾನ ಎಂಬ ಊರಿನ ಮನೆಯೊಂದರ ಅಂಗಳದಲ್ಲಿ ಬಹುತೇಕ ಪ್ರತಿದಿನ ಈ ದೃಶ್ಯ ನೋಡಲು ಸಿಗುತ್ತದೆ.

ಹೆಜ್ಜೆ ಮೇಲೆ ಹೆಜ್ಜೆ ಇಟ್ಟು, ಕತ್ತು ಕೊಂಕಿಸುತ್ತ ವೈಯಾರ ಮಾಡುವ ಈ ನವಿಲು, ಹಸಿರು ಕಾಡು ದಾಟಿ, ಬೇಣದಿಂದ ಕುಣಿಯುತ್ತ, ದಣಪೆ ದಾಟಿ